ಈ ಹಿನ್ನೆಲೆಯಲ್ಲಿ 1995ರಿಂದ ಪ್ರಾರಂಭಿಸಿ, ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಲು ಕಾರ್ಯಕ್ರಮವನ್ನು ಪ್ರಯೋಗಾತ್ಮಕವಾಗಿ ಹಮ್ಮಿಕೊಂಡಿದೆ. ಅದರಂತೆ, ರಾಜ್ಯದಾದ್ಯಂತ ಕ್ಲಿಷ್ಟಕರವೆಂದು ವರ್ಗೀಕರಣ ಮಾಡಿರುವ ತಾಲ್ಲೂಕುಗಳಲ್ಲಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳಾದ ಚೆಕ್ ಡ್ಯಾಂ, ಇಂಗು ಬಾವಿ, ಇಂಗು ಕೊಳವೆ ಬಾವಿ, ಗೋಕಟ್ಟೆಗಳಲ್ಲಿ ಹೂಳು ತೆಗೆಯುವುದು ಇತ್ಯಾದಿ ರಚನೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಇದುವರೆಗೂ 1091 ವಿವಿಧ ಅಂತರ್ಜಲ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಲಾಗಿದ್ದು ಇದಕ್ಕೆ ರೂ. 667.23 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಇ) ಅಂತರ್ಜಲ ಮಟ್ಟದ ಕುಸಿತವನ್ನು ತಡೆಯಲು ಹಾಗೂ ವೃದ್ಧಿಪಡಿಸಲು ಜಲಸಂಪನ್ಮೂಲ ಕ್ರೋಢೀಕರಣ ಯೋಜನೆಯಡಿಯಲ್ಲಿ 58 ತಾಲ್ಲೂಕುಗಳಲ್ಲಿ 50,221 ಸಂಖ್ಯೆಯ ವಿವಿಧ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ರೂ. 471.00 ಕೋಟಿ ಅಂದಾಜು ವೆಚ್ಚದಲ್ಲಿ ಹಂತ ಹಂತವಾಗಿ 5 ವರ್ಷಗಳ ಅವಧಿಯಲ್ಲಿ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕಾ ವತಿಯಿಂದ ಸಾಲ ಪಡೆದ ಫಲಾನುಭವಿಗಳು

3075 (3578) : ಶ್ರೀ ಚೆನ್ನಿಗಪ್ಪ ಸಿ (ಕೊರಟಗೆರೆ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಇಲಾಖಾ ವತಿಯಿಂದ ಎಷ್ಟು ಮಂದಿ ಫಲಾನುಭವಿಗಳಿಗೆ ಸಣ್ಣ ಪ್ರಮಾಣದ ಕೈಗಾರಿಕೆಯನ್ನು ತೆರೆಯಲು 2000-01, 2001-02 ಮತ್ತು 2002-03ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಸಾಲದ ಮೊತ್ತವೆಷ್ಟು?

ಆ) ಈ ಸಾಲಿನ ಮೊತ್ತದ ಜೊತೆಗೆ ಸಬ್ಸಿಡಿ ಹಣವನ್ನು ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು:

ಇ) ಇನ್ನು ಎಷ್ಟು ಮಂದಿ ಫಲಾನುಭವಿಗಳಿಗೆ ಸಬ್ಸಿಡಿ ಹಣವನ್ನು ಸಂದಾಯ ಮಾಡಬೇಕಾಗಿದೆ?

ಈ) ಸಬ್ಸಿಡಿ ಹಣ ಮಂಜೂರಾಗದೆ ಸಣ್ಣ ಪ್ರಮಾಣದ ಕೈಗಾರಿಕೆಯ ಮಾಲೀಕರು ತೀವ್ರ ರೀತಿಯ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಉ) ಹಾಗಿದ್ದರೆ, ಸಬ್ಸಿಡಿ ಹಣವನ್ನು ಸಕಾಲದಲ್ಲಿ ಫಲಾನುಭವಿಗಳಿಗೆ ಸಂದಾಯ ಮಾಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು):

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಇಲಾಖಾವತಿಯಿಂದ ಸಣ್ಣ ಪ್ರಮಾಣದ ಕೈಗಾರಿಕೆಯನ್ನು ತೆರೆಯಲು ಯಾವುದೇ ಸಾಲ ಯೋಜನೆ ಇರುವುದಿಲ್ಲ.

ಆ) 1. ಸಾಲದ ಯೋಜನೆ ಇರುವುದಿಲ್ಲ.

2. 2002-03ನೇ ಸಾಲಿನವರೆಗೂ 3184 ಘಟಕಗಳಿಗೆ ರೂ. 4501.51 ಲಕ್ಷಗಳ ಸಹಾಯ ಧನವನ್ನು ಬಿಡುಗಡೆಗೊಳಿಸಲಾಗಿದೆ.

ಇ) 18279 ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 405.67 ಕೋಟಿಗಳಷ್ಟು ಸಹಾಯಧನ ಬಾಕಿ ಇರುತ್ತದೆ.

ಈ) ಸಹಾಯಧನ ಮಂಜೂರಾತಿಗಾಗಿ ಬಾಕಿ ಇರುವಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ. ಆದಾಗ್ಯೂ 18279 ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ರೂ. 450.68 ಕೋಟಿಗಳಷ್ಟು ಸಹಾಯಧನವನ್ನು ಮಂಜೂರು ಮಾಡಲಾಗಿದೆ.

ಉ) ಆಯವ್ಯಯದಲ್ಲಿ ಹೆಚ್ಚಿನ ಅನುದಾನವನ್ನು ಒದಗಿಸಿ ಸಹಾಯಧನವನ್ನು ಆದಷ್ಟು ಬೇಗನೆ ಬಿಡುಗಡೆಗೊಳಿಸಲು ವಿಶೇಷ ಪ್ರಯತ್ನವನ್ನು ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 2003–04ನೆ ಸಾಲಿನ ಆಯವ್ಯಯದಲ್ಲಿ ಸಹಾಯಧನ ಯೋಜನೆಗಾಗಿ ರೂ. 12.56 ಕೋಟಿ ಆಯವ್ಯಯವನ್ನು ಒದಗಿಸಲಾಗಿದೆ. ಇದಲ್ಲದೆ, ಬಾಂಡ್ ಹೊರಡಿಸುವ ಮುಖಾಂತರ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೊರಟಗೆರೆ ತಾಲ್ಲೂಕಿನಲ್ಲಿ ಪಶು ಆಸ್ಪತ್ರೆಗಳಿಗೆ ಔಷಧೋಪಚಾರಗಳನ್ನು ಒದಗಿಸುವುದು

3076 (3579) : ಶ್ರೀ ಚನ್ನಿಗಪ್ಪ ಸಿ : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಪಶುಚಿಕಿತ್ಸಾಲಯದ, ಪಶುಆಸ್ಪತ್ರೆಗಳ ಸಂಖ್ಯೆ ಎಷ್ಟು;

ಆ) ಈ ಪಶು ಆಸ್ಪತ್ರೆಗಳಿಗೆ ಸರ್ಕಾರದ ವತಿಯಿಂದ ಸರಿಯಾದ ರೀತಿಯಲ್ಲಿ ಜಾನುವಾರುಗಳ ಚಿಕಿತ್ಸೆಗೆ ಔಷದೋಪಚಾರ ಲಭ್ಯವಾಗದೇ ರೈತಾಪಿ ವರ್ಗದ ಜನತೆಗೆ ತುಂಬಾ ಅನಾನುಕೂಲವಾಗಿರುವುದು ನಿಜವಲ್ಲವೇ;

ಇ) ಸಕಾಲದಲ್ಲಿ ಔಷಧೋಪಚಾರವನ್ನು ಒದಗಿಸಿ ಬಡ ರೈತಾಪಿ ವರ್ಗದವರ ಜಾನುವಾರುಗಳ ಚಿಕಿತ್ಸೆಗೆ ಅನುಕೂಲ ಮಾಡಿಕೊಡಲು ಕೈಗೊಳ್ಳುವ ಕ್ರಮಗಳೇನು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ)

ಪಶು ಆಸ್ಪತ್ರೆಗಳು	2
ಪಶು ಚಿಕಿತ್ಸಾಲಯ	3
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	9
ಕೃತಕ ಗರ್ಭಧಾರಣಾ ಕೇಂದ್ರ	1
ಒಟ್ಟು	**15**

ಆ) ಇಲ್ಲಾ

ಇ) 2002–2003ನೇ ಸಾಲಿನಲ್ಲಿ ಈ ಕ್ಷೇತ್ರದ ಪಶುವೈದ್ಯಕೀಯ ಸಂಸ್ಥೆಗಳಿಗೆ ಒಟ್ಟು ರೂ. 5.05 ಲಕ್ಷಗಳ ಮೊತ್ತದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

ಕೊರಟಗೆರೆ ತಾಲ್ಲೂಕಿನಲ್ಲಿರುವ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳು

3077 (3580) : ಶ್ರೀ ಚನ್ನಿಗಪ್ಪ ಸಿ (ಕೊರಟಗೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು;